**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

**ಸಂಖ್ಯೆ:** ಕಾಶಿಇ/ಶೈವಿ/119/ಸು.ಮಾ/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ:19.12.2022

## ಸುತ್ತೋಲೆ

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ '**ಸುಶಾಸನ ಮಾಸ**'ದ ಅಂಗವಾಗಿ ಉತ್ತಮ ಪ್ರಶಸ್ತಿಗಳನ್ನು ನೀಡುವ ಕುರಿತು.

*****

ಸುಶಾಸನ ಅಥವಾ ಉತ್ತಮ ಆಡಳಿತ (Good Governance) ರಾಷ್ಟ್ರದ ಮತ್ತು ರಾಜ್ಯದ ಪ್ರಗತಿ, ಸುಸ್ಥಿರತೆ ಹಾಗೂ ಸಮೃದ್ಧಿಗೆ ಅತ್ಯಗತ್ಯವಾಗಿರುತ್ತದೆ. ಡಿಸೆಂಬರ್ 25 ನೇ ದಿನಾಂಕವನ್ನು ಸರ್ಕಾರ '**ಸುಶಾಸನ ದಿವಸ**' ಎಂದು ಘೋಷಿಸಿ ಪ್ರತಿ ವರ್ಷ ಆಚರಿಸುತ್ತಿದೆ. ಈ ವರ್ಷವೂ ಉನ್ನತ ಶಿಕ್ಷಣ ಇಲಾಖೆಗೆ ಒಳಪಡುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ '**ಸುಶಾಸನ ಮಾಸ**'ದ ಅಂಗವಾಗಿ ವಿವಿಧ ಆಯಾಮಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿರುವ ಕಾಲೇಜುಗಳಿಗೆ ಪ್ರಶಸ್ತಿಗಳನ್ನು ನೀಡಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರು ವಿವಿಧ ಪ್ರಶಸ್ತಿಗಳಿಗೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಕೋಷ್ಟಕದಲ್ಲಿ ಸೂಚಿಸಿದಂತೆ ಕಾಲೇಜಿನ ಮಾಹಿತಿಗಳನ್ನು ತಮ್ಮ ದೃಢೀಕರಣದೊಂದಿಗೆ ಇಲಾಖೆಯು ಒದಗಿಸಿರುವ ಗೂಗಲ್‌ಫಾರಂ ಮೂಲಕ ದಿನಾಂಕ:22-12-2022 ಅಪರಾಹ್ನ :3.00 ಗಂಟೆಯೊಳಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿದೆ.

ಕಾಲೇಜುಗಳು ತಾವು ಸ್ಪರ್ಧಿಸ ಬಯಸುವ ವಿಭಾಗಗಳಲ್ಲಿ ಮಾತ್ರ ಈ ಕೆಳಕಂಡ ಮಾನದಂಡಗಳೊಂದಿಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಅಡಕ: ಮಾನದಂಡಗಳ ವಿವರ.

**ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು**

**ಇವರಿಗೆ:**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತುಕಲಬುರಗಿ.
2. ಎಲ್ಲ ಸರ್ಕಾರಿ ಪ್ರಥಮ ಕಾಲೇಜುಗಳ ಪ್ರಾಂಶುಪಾಲರು,-- ಸೂಕ್ತ ಕ್ರಮಕ್ಕಾಗಿ
3. ಕಛೇರಿ ಪ್ರತಿ

## ಅತ್ಯುತ್ತಮ ಪ್ರಶಸ್ತಿಗಳು - ಮಾನದಂಡಗಳು

| ಕ್ರ.ಸಂ | ಪ್ರಶಸ್ತಿಗಳ ವಿವರ | ಪ್ರಶಸ್ತಿಗೆ ಸಲ್ಲಿಸಬೇಕಾದ ಕಳೆದ 3 ವರ್ಷಗಳಮಾಹಿತಿ |
|---|---|---|
| 1 | ಅತ್ಯುತ್ತಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜು | ಇನ್‌ಟೇಕ್ ಮತ್ತು ಪ್ರವೇಶಾತಿ |
| | | ಕರ್ನಾಟಕ LMS ಅನುಷ್ಠಾನ |
| | | ಬೋಧನೆಗೆ ಸ್ಮಾರ್ಟ್ ತರಗತಿಗಳ ಬಳಕೆ |
| | | ನ್ಯಾಕ್ ಗ್ರೇಡ್ |
| 2 | ಅತ್ಯುತ್ತಮ ಪ್ಲೇಸ್ ಮೆಂಟ್ ಸೆಲ್ | ಕೈಗಾರಿಕೆಗಳು/ಸಂಸ್ಥೆಗಳೊಡನೆ ಮಾಡಿಕೊಂಡ ಒಪ್ಪಂದಗಳು |
| | | ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳ ಸಂಖ್ಯೆ |
| | | ಅನ್ ಅಕಾಡೆಮಿ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ |
| | | ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧಪಡಿಸಲು ನಡೆಸಿದ ತರಬೇತಿ ಕಾರ್ಯಕ್ರಮಗಳ ಸಂಖ್ಯೆ |
| | | ಸ್ವ-ಉದ್ಯೋಗ ಮತ್ತು ಕೈಗಾರಿಕಾ ಉದ್ಯೋಗಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ನಡೆಸಿದ ತರಬೇತಿ ಕಾರ್ಯಕ್ರಮಗಳ ಸಂಖ್ಯೆ |
| 3 | ಅತ್ಯುತ್ತಮ ಪಠ್ಯೇತರ ಚಟುವಟಿಕೆಗಳು | ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಪ್ರಬಂಧ, ಭಾಷಣ, ಚರ್ಚೆ ಇತ್ಯಾದಿ ಸ್ಪರ್ಧೆಗಳಲ್ಲಿ ಗಳಿಸಿದ ಬಹುಮಾನಗಳು |
| | | ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಯೋಗ, ಫಿಸಿಕಲ್ ಫಿಟ್ನೆಸ್, ಕ್ರೀಡಾ ಸ್ಪರ್ಧೆಗಳಲ್ಲಿ ಗಳಿಸಿದ ಬಹುಮಾನಗಳು |
| | | ಟಿವಿ/ರೇಡಿಯೋ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ |
| | | ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ನೀಡಿರುವ ಸಾರ್ವಜನಿಕ ಕಾರ್ಯಕ್ರಮಗಳು |
| | | ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ/ ಅಂತಾರಾಷ್ಟ್ರೀಯ ಮಟ್ಟದಲ್ಲಿ NCC/NSS/Red Cross/ Scouts & Guides ವಿದ್ಯಾರ್ಥಿಗಳ ಭಾಗವಹಿಸುವಿಕೆ |
| 4 | ಅತ್ಯುತ್ತಮ ಫಲಿತಾಂಶ | ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿನ ಫಲಿತಾಂಶ |
| | | ಗಳಿಸಿದ ವಿಶ್ವವಿದ್ಯಾಲಯದ ರಾಂಕ್‌ಗಳು |
| 5 | ಅತ್ಯುತ್ತಮ ಸಕಾಲ ಸೇವೆ | ಆನ್ ಲೈನ್ ನಲ್ಲಿ ನೀಡಿದ ಸೇವೆಗಳ ಸಂಖ್ಯೆ |
| | | ನಿಗದಿತ ಕಾಲಾವಧಿಯೊಳಗೆ ನೀಡಿದ ಸೇವೆಗಳ ಸಂಖ್ಯೆ |
| | | ಫಲಾನುಭವಿಗಳ ಸಂಖ್ಯೆ |
| 6 | ಅತ್ಯುತ್ತಮ ವಿದ್ಯಾರ್ಥಿ-ಸಹಾಯ ಕಾರ್ಯಕ್ರಮಗಳು | ಕುಂದುಕೊರತೆಗಳ ನಿವಾರಣೆ |
| | | ವಿದ್ಯಾರ್ಥಿವೇತನ |
| | | ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಪಟ್ಟ ಉಪಕ್ರಮಗಳು |
| 7 | ಅತ್ಯುತ್ತಮ ಸಮಾಜಸೇವೆ | ಹಳ್ಳಿಗಳನ್ನು ದತ್ತು ತೆಗೆದುಕೊಳ್ಳುವುದು/ಅರಣ್ಯಗಳು, ಕೆರೆಗಳು, ಐತಿಹಾಸಿಕ ಸ್ಮಾರಕಗಳ ಪುನಶ್ಚೇತನ/ಸಾಕ್ಷರತೆ ಪ್ರಸಾರ/ ಇತರ |
| | | ಸಾಮಾಜಿಕ ಸಮಸ್ಯೆಗಳ ಕುರಿತು ನಡೆಸಿದ ಅಭಿಯಾನಗಳು/ಜಾಗೃತಿ ಕಾರ್ಯಕ್ರಮಗಳು |
| | | ರಾಷ್ಟ್ರೀಯ ಶಿಕ್ಷಣ ನೀತಿ-2020ರ ಕುರಿತು ನಡೆಸಿದ ಜಾಗೃತಿ ಕಾರ್ಯಕ್ರಮಗಳು |
| | | ಕೋವಿಡ್-19 ಸಂಬಂಧಿತ ಸೇವೆಗಳು |
| | | ಸಮಾಜ ಸೇವೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು |
| 8 | ಅತ್ಯುತ್ತಮ ಅಭ್ಯಾಸಗಳು | ದತ್ತಿ ಸ್ಥಾಪನೆ |
| | | ಸಾಂಸ್ಥಿಕವಾಗಿ ವಿದ್ಯಾರ್ಥಿಗಳಿಗೆ ಊಟ/ಫೀಸು ನೀಡುವ ಕಾರ್ಯಕ್ರಮಗಳು |
| | | ದಾನಿಗಳಿಂದ ಕಾಲೇಜಿನ ಅಭಿವೃದ್ಧಿಗೆ ಪಡೆದುಕೊಂಡ ನಿಧಿ |
| | | ಹಸಿರು ಉಪಕ್ರಮಗಳು |
| | | ಸ್ವಚ್ಛತೆ, ಶುಚಿತ್ವ ಮತ್ತು ಕಾಲೇಜಿನ ಕಟ್ಟಡ/ ಆವರಣವನ್ನು ಅಂದಗೊಳಿಸುವಿಕೆ |
| 9 | ಇನ್ನಿತರೆ ಸಾಧನೆಗಳು | ವಿವರಗಳನ್ನು ಒದಗಿಸುವುದು. |